# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 783 (901)
2. ಸದಸ್ಯರ ಹೆಸರು : ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 23.02.2023
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೇಂದ್ರ ಸರ್ಕಾರದಿಂದ ಇತ್ತೀಚೆಗೆ ಬಿಡುಗಡೆಯಾಗಿರುವ 5300 ಕೋಟಿ ಅನುದಾನವನ್ನು ಭದ್ರಾ ಮೇಲ್ದಂಡೆ ಯೋಜನೆ ಶೀಘ್ರ ಅನುಷ್ಠಾನಕ್ಕಾಗಿ ಹಮ್ಮಿಕೊಂಡಿರುವ ಕ್ರಮಗಳೇನು; | ಕೇಂದ್ರ ಸರ್ಕಾರವು 2023-24 ನೇ ಸಾಲಿನ ಆಯವ್ಯಯದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ರೂ.5300 ಕೋಟಿಗಳ ಹಣಕಾಸಿನ ನೆರವನ್ನು ಘೋಷಿಸಿರುತ್ತದೆ. ಈ ಹಣಕಾಸಿನ ನೆರವನ್ನು ಎ.ಐ.ಬಿ.ಪಿ. ಮಾರ್ಗಸೂಚಿಗಳನ್ನಾಧರಿಸಿ ಒದಗಿಸಲಾಗುತ್ತದೆ.<br><br>ಭದ್ರಾ ಮೇಲ್ದಂಡೆ ಯೋಜನೆ ಶೀಘ್ರ ಅನುಷ್ಠಾನಕ್ಕಾಗಿ ಈ ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ಲಿಫ್ಟ್ ಮಾಡುವ ಕಾಮಗಾರಿ, ಚಿತ್ರದುರ್ಗ ಶಾಖಾ ಕಾಲುವೆಯ ಕಾಮಗಾರಿಗಳು, ತುಮಕೂರು ಶಾಖಾ ಕಾಲುವೆಯ ಕಾಮಗಾರಿಗಳು, ಕೆರೆ ತುಂಬಿಸುವ ಕಾಮಗಾರಿಗಳು ಹಾಗೂ ಸೂಕ್ಷ್ಮ ನೀರಾವರಿ ಒದಗಿಸುವ ಕಾಮಗಾರಿಗಳನ್ನು 2024-25 ರೊಳಗೆ ಪೂರ್ಣಗೊಳಿಸಿ, ಅವುಗಳ ಅಡಿ ಬರುವ ಯೋಜಿತ ಅಚ್ಚುಕಟ್ಟು ಮತ್ತು ನಿಗದಿತ ಕೆರೆಗಳನ್ನು ತುಂಬಿಸಲು ಕಾರ್ಯಕ್ರಮ ರೂಪಿಸಲಾಗಿದೆ. |
| ಆ) | ತರೀಕೆರೆ ತಾಲ್ಲೂಕಿನಲ್ಲಿ ಬರುವಂತಹ ಒಂದು ಗ್ರಾಮ ವ್ಯಾಪ್ತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿರುವ ಕಾರಣ ಇಡೀ ಯೋಜನೆ ತಡವಾಗಲು ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆಯ ಪ್ಯಾಕೇಜ್-4 ರ ಅಡಿಯಲ್ಲಿ ಬರುವ ತರೀಕೆರೆ ತಾಲ್ಲೂಕಿನ ಅಬ್ಬಿನಹೊಳಲು ಗ್ರಾಮದ ಐತೀರ್ಪು 2018 ರಲ್ಲಿ ಅನುಮೋದನೆಗೊಂಡಿದ್ದು, ಸದರಿ ಪ್ಯಾಕೇಜ್‌ನಲ್ಲಿ ಬರುವ ಅಬ್ಬಿನಹೊಳಲು ಗ್ರಾಮದ ಗಡಿಯ ಪಕ್ಕದ ಗ್ರಾಮವಾದ ಹೆಬ್ಬೂರು ಗ್ರಾಮದ ಭೂಪರಿಹಾರ ಮೊತ್ತವು ಪ್ರತಿ ಗುಂಟೆಗೆ ರೂ.13596ರಂತೆ ಅನುಮೋದನೆಯಾಗಿರುತ್ತದೆ. ಅಬ್ಬಿನಹೊಳಲು ಗ್ರಾಮದ ಪರಿಹಾರ ಮೊತ್ತವು ಪ್ರತಿ ಗುಂಟೆಗೆ ರೂ.2505 ರಂತೆ ಕಂದಾಯ ಇಲಾಖೆಯಿಂದ ಅನುಮೋದನೆ ದೊರೆತಿದ್ದು, ಸದರಿ ಗ್ರಾಮಗಳ ಅನುಮೋದಿತ ಪರಿಹಾರ ಮೊತ್ತ ವ್ಯತ್ಯಾಸವು ಪ್ರತಿ ಗುಂಟೆಗೆ ರೂ.11091 ಇರುತ್ತದೆ. ಈ ಕಾರಣದಿಂದ ಹೆಬ್ಬೂರು ಗ್ರಾಮದ ಪರಿಹಾರ ಮೊತ್ತವನ್ನು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ನೀಡಬೇಕೆಂದು ಅಬ್ಬಿನಹೊಳಲು ಗ್ರಾಮದ ಭೂಮಾಲೀಕರು ಒತ್ತಾಯಿಸಿರುತ್ತಾರೆ.<br><br>ಅದರಂತೆ, ಅಬ್ಬಿನಹೊಳಲು ಗ್ರಾಮಕ್ಕೆ ಅವಾರ್ಡ್ ಮೊತ್ತವನ್ನು ವಿತರಿಸುವ ಸಲುವಾಗಿ ನಿಗಮದಿಂದ ಮತ್ತು ಭೂಸ್ವಾಧೀನಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು, ತರೀಕೆರೆ ಇವರ ಅಧ್ಯಕ್ಷತೆಯಲ್ಲಿ ಹಲವಾರು ಭಾರಿ ಸಭೆ ನಡೆಸಿ ರೈತರೊಂದಿಗೆ ಚರ್ಚಿಸಿ ಮನವೊಲಿಸಲಾಗಿರುತ್ತದೆ. ಸದರಿ ಗ್ರಾಮದಲ್ಲಿ 33 ಫಲಾನುಭವಿಗಳ ಒಟ್ಟು 44 ಎಕರೆ-20.08 ಗುಂಟೆ ಭೂಸ್ವಾಧೀನವಾಗುತ್ತಿದ್ದು, ಸುಮಾರು 30 ಫಲಾನುಭವಿಗಳು ಅವಾರ್ಡ್ ಐತೀರ್ಪು ಮೊತ್ತಕ್ಕೆ ಆಕ್ಷೇಪಣೆಯನ್ನು ಲಿಖಿತ ರೂಪದ ಮೂಲಕ ಸಲ್ಲಿಸಿ ಅವಾರ್ಡ್ ಮೊತ್ತವನ್ನು ಪಡೆದುಕೊಂಡಿರುತ್ತಾರೆ.<br><br>ಸದರಿ ಗ್ರಾಮದ ಅವಾರ್ಡ್ ಮೊತ್ತವನ್ನು ಪಡೆದುಕೊಂಡ 30 ಫಲಾನುಭವಿಗಳ ಪೈಕಿ 26 ಫಲಾನುಭವಿಗಳು ಹೆಚ್ಚಿನ ಪರಿಹಾರ ಮೊತ್ತಕ್ಕಾಗಿ ಮಾನ್ಯ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು ಇಲ್ಲಿ ದಾವೆ ಹೂಡಿರುತ್ತಾರೆ ಹಾಗೂ ಪ್ರಕರಣವು ಚಾಲ್ತಿಯಲ್ಲಿರುತ್ತದೆ.<br><br>ಈ ಹಿನ್ನಲೆಯಲ್ಲಿ ಕಂದಾಯ ಇಲಾಖೆ ಮತ್ತು ಗೃಹ ಇಲಾಖೆಯವರೊಂದಿಗೆ ಸಮನ್ವಯ ಸಾಧಿಸಿ ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಯನ್ನು ಕೈಗೊಳ್ಳಲು ಎಲ್ಲಾ ಕ್ರಮಗಳನ್ನು ಜರುಗಿಸಲಾಗುತ್ತಿದೆ. |
| ಇ) | ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ವತಿಯಿಂದ ಮಂಜೂರಾದ ಹಣದಲ್ಲಿ ನಾಲೆ-ದುರಸ್ತಿ ಕಾರ್ಯಗಳು ಆರಂಭವಾಗುವುದು ಯಾವಾಗ? (ಯೋಜನೆಯ ಪೂರ್ಣ ಮಾಹಿತಿ ನೀಡುವುದು) | ವಿ.ವಿ.ಸಾಗರ ಜಲಾಶಯ ಯೋಜನೆಯು ಸುಮಾರು 113 ವರ್ಷ ಹಳೆಯದಾಗಿದ್ದು, ರಾಜ್ಯದ ಅತ್ಯಂತ ಹಳೆಯ ಡ್ಯಾಂಗಳಲ್ಲಿ ಒಂದಾಗಿರುತ್ತದೆ. ಜಲಾಶಯದಿಂದ ಸುಮಾರು 12135 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿರುತ್ತದೆ. ಒಟ್ಟು 129 ಕಿ.ಮೀ ಉದ್ದದ ಕಾಲುವೆಯ ಬಹುತೇಕ unlined ಆಗಿದ್ದು, ಬಹಳಷ್ಟು ನೀರು ವ್ಯರ್ಥವಾಗಿ ಪೋಲಾಗುತ್ತಿದೆ. ಆದ ಕಾರಣ ಈ ಎಲ್ಲಾ ನಾಲೆಗಳನ್ನು ಲೈನಿಂಗ್ ಮಾಡಲು ಹಾಗೂ ನಾಲೆಯ ಉದ್ದಕ್ಕೂ ಇರುವ ಸಿ.ಡಿ.ಗಳ ಆಧುನೀಕರಣಗೊಳಿಸುವ ಹಾಗೂ ನೂತನ ತಂತ್ರಜ್ಞಾನದಡಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸುವ ಸಮಗ್ರ ಕಾಮಗಾರಿಗಳ ರೂ. 732.60 ಕೋಟಿ<br><br>ಮೊತ್ತದ ಯೋಜನೆಯನ್ನು ಕೇಂದ್ರ ಸರ್ಕಾರದ Support for Irrigation Modernisation Programme (SIMP) |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | ಕಾರ್ಯಕ್ರಮದಡಿ ADB ಸಹಯೋಗದಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ. ಪ್ರಸುತ್ತ, ಸದರಿ ಕಾರ್ಯಕ್ರಮದ Plan-2ರಡಿ ಯೋಜನೆಗಳ irrigation modernisation plan ಸಿದ್ಧಪಡಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಜಸಂಇ 19 ಡಬ್ಲ್ಯೂಎಲ್ಎ 2023**

**(ಗೋವಿಂದ ಎಂ.ಕಾರಜೋಳ)**
**ಜಲಸಂಪನ್ಮೂಲ ಸಚಿವರು**